ದಿನಾಂಕ 16-04-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ಈ ದಾವೆಯನ್ನು ಯಾವ ಏತಕ್ಕಾಗಿ ಹಾಕಿದ್ದಾರೆಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳೆಲ್ಲಾ ಮುನಿಯಪ್ಪನ ಮಕ್ಕಳು ಎಂದರೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 4 ರವರುಗಳು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಮುನಿಯಪ್ಪ ಮತ್ತು ಮುನಿನಾರಾಯಣ್ಣರವರಿಂದ 1995 ರಲ್ಲಿ ಖರೀದಿ ಮಾಡಿದೆ. ಅವರು ತಿಮಯ್ಯನ ಮಕ್ಕಳು ಎಂದು ಕ್ರಯಪತ್ರ ಬರೆದುಕೊಟ್ಟಿದ್ದಾರೆ. ಕ್ರಯಕ್ಕೆ ಕೊಂಡಾಗ ತಿಮ್ಮಯ್ಯರವರಿಗೆ ಎಷ್ಟು ಜನ ಮಕ್ಕಳು ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತು ತಿಮ್ಮಯ್ಯರವರಿಗೆ ಪಿತ್ರಾರ್ಜಿತವಾಗಿ ಬಂದದ್ದು ಎಂದರೆ ಗೊತ್ತಿಲ್ಲ. ಕ್ರಯಪತ್ರವನ್ನು ಮುನಿಯಪ್ಪ ಮುನಿನಾರಾಯಣ್ಣ ಮತ್ತು ನಾರಾಯಣ್ಣ ಬರೆದುಕೊಟ್ಟರು. ಅವರಲ್ಲಾ ತಿಮ್ಮಯ್ಯನ ಮಕ್ಕಳು ಎಂದು ತಿಳಿದುಕೊಂಡೇ. ಆ ಸಮಯಕ್ಕೆ ತಿಮ್ಮಯ್ಯನಿಗೆ ಬೇರೆ ಎಷ್ಟು ಜನ ಮಕ್ಕಳು ಎಂದು ನಾನು ತಿಳಿದುಕೊಳ್ಳಲಿಲ್ಲ. ನನಗೆ ಮಾರಾಟ ಮಾಡಿದವರು ಐ ಹೆಚ್ ಸಿ ನಂ 7/83-84 ರಂತೆ 468/1, 3 ಎಕರೆ 2 ಗುಂಟೆಗೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸರಿ. ಮ್ಯುಟೇಷನ್ ನಲ್ಲಿ ತಿಮ್ಮಯ್ಯರವರು 10 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆಂದು ಬರೆದಿದೆ ಎಂದರೆ ಗೊತ್ತಿಲ್ಲ. ಮುನಿಯಪ್ಪರವರಿಗೆ ಇಬ್ಬರು ಪತ್ನಿಯರು ಎಂದು ನನಗೆ ಗೊತ್ತಿಲ್ಲ. ಯರಮ್ಮ ಮತ್ತು ಮುನಿವೆಂಕಟಪ್ಪ ರವರು ಮುನಿಯಪ್ಪನ ಇಬ್ಬರು ಪತ್ನಿಯರು ಎಂದರೆ ಸಾಕ್ಷಿ ನನಗೆ ಆಗ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಮುನಿವೆಂಕಟಮ್ಮನ ಮಕ್ಕಳು ಅವರಿಗೂ ದಾವಾ ಆಸ್ತಿಯಲ್ಲಿ ಸಮನಾದ ಹಕ್ಕು ಇದೆ ಎಂದರೆ ಗೊತ್ತಿಲ್ಲ. ನನಗೆ ಕ್ರಯಪತ್ರ ಬರೆದುಕೊಟ್ಟವರಲೆಲ್ಲಾ ಅವಿದ್ಯಾವಂತರೇ ಎಂದರೆ ಸರಿ. ನಿಡಿ-1 ರಲ್ಲಿ ಬರೆದಿರುವ ವಿಚಾರ ಮಾರಾಟಗಾರರಿಗೆ ಗೊತ್ತೇ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ಕ್ರಯಪತ್ರವನ್ನು ಮೋಸದಿಂದ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ವಾದಿಗಳಿಗೆ ಅರ್ಧ ಭಾಗದ ಹಕ್ಕು ಇದೆ ಅವರಿಗೆ ಮೋಸ ಮಾಡಬೇಕೆಂದು ಕ್ರಯಪತ್ರ ಬರೆಸಿಕೊಂಡಿದ್ದೇನೆಂದರ ಸರಿಯಲ್ಲ. ನಿಡಿ-1 ಮೋಸದಿಂದ ಬರೆಸಿಕೊಂಡಿರುವ ದಾಖಲೆಯಾದ್ದರಿಂದ, ವಂಶವೃಕ್ಷ ಹಾಗೂ ಎಂ. ಆರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಗಳು ಮುನಿಯಪ್ಪನವರ ಮಕ್ಕಳು ಎಂದು ಗೊತ್ತಿದ್ದೂ ಸಹ ಲಿಖಿತ ಹೇಳಿಕೆಯಲ್ಲಿ ಉದ್ದೇಶ ಪೂರ್ವಕವಾಗಿ ಹೇಳಿಲ್ಲ ಎಂದರ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ವಕೀಲರ ಜೊತೆ ಚರ್ಚಿಸಿ ತಯಾರು ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ರವರು ಎಲ್ಲಿದ್ದಾರೆಂಬ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ವಾದಿ ಈ ದಾವೆ ಸಲ್ಲಿಸಿದ ನಂತರ ನಾನು ಪ್ರತಿವಾದಿ 1 ರಿಂದ 4 ರವರನ್ನು ಬೇಟಿ ಮಾಡಿಲ್ಲ. ವಾದಿಗಳಿಗೆ ಅನ್ಯಾಯ ಮಾಡಬೇಕೆಂದು , ಲಿಖಿತ ಹೇಳಿಕೆ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಲ್ಲವನ್ನು ಅಲ್ಲಗಳೆದಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.